**ಓ ಎಸ್ 9/2021 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 23.06.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1 ರಿಂದ 3 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಕೆ ಹೆಚ್ ಆರ್ ವಕೀಲರ ಪರವಾಗಿ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

ನಮ್ಮ ಅಜ್ಜಿ ಮತ್ತು ತಾತನಿಗ ಸರ್ವೆ ನಂ. 72/1 ಎ ರಲ್ಲಿ 0.32 ಗುಂಟೆ, ಸರ್ವೆ ನಂ. 72/1 ಎ ರಲ್ಲಿ 0.06 ಗುಂಟೆ, ಸರ್ವೆ ನಂ. 75/4 ರಲ್ಲಿ 0.41 ಗುಂಟೆ ಹಾಗೂ ಒಂದು ಮನೆಯನ್ನು ನೀಡಿದ್ದಾರೆ. ಮನೆಯು ಪಾಂಡವಪುರದ ಚಿಕ್ಕಮಸೀದಿ ಬೀದಿಯಲ್ಲಿದೆ. ಸರ್ವೆ ನಂ. 72/1 ಎ ಮತ್ತು 75/4 ಸಹ ಪಾಂಡವಪುರದಲ್ಲಿಯೇ ಇದೆ. ನಮ್ಮ ಅಜ್ಜಿ ತಾತನಿಗೆ ಆಸ್ತಿ ನೀಡಿದ ಬಗ್ಗೆ ಬರವಣಿಗೆ ಇಲ್ಲ. ದಿನಾಂಕ 17.09.1984 ರಲ್ಲಿ ಆಗಿರುವ ಪಾಲುಪಟ್ಟಿಯಲ್ಲಿ ಈ ಮೇಲೆ ಹೇಳಿದ ಆಸ್ತಿಗಳು ನಮೂದು ಆಗಿವೆ ಎಂದರೆ ಸರಿ. ನಮ್ಮ ಅಜ್ಜಿ ಮತ್ತು ತಾತ ಕಾಲವಾದ ನಂತರ ಈ ಮೇಲ್ಕಂಡ ಆಸ್ತಿಗಳು ಯಾರಿಗೆ ಹೋಗಬೇಕು ಎಂಬುದನ್ನು ಆ ಪಾಲುಪಟ್ಟಿಯಲ್ಲಿ ಬರೆಯಲಾಗಿದೆ ಎಂದರೆ ಪಾಲುಪಟ್ಟಿ ಆಗಿಲ್ಲ. ಸಾಕ್ಷಿ ಮುಂದುವರಿದು ಮೌಖಿಕವಾಗಿ ಯಾರು ಯಾರಿಗೆ ಯಾವ ಯಾವ ಆಸ್ತಿಗಳು ಸೇರತಕ್ಕದ್ದು ಎಂದು ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಹಾಗೆಯೇ ನಮ್ಮ ಅಜ್ಜಿ ಮತ್ತು ತಾತ ಕಾಲವಾದ ನಂತರ ಈ ಮೇಲ್ಕಂಡ ಆಸ್ತಿಗಳು ಯಾರಿಗೆ ಹೋಗಬೇಕು ಎಂಬುದನ್ನು ಮೌಖಿಕವಾಗಿ ಒಪ್ಪಿಕೊಂಡಿದ್ದಾರೆ. ಆ ಮಾತುಕತೆ ಪ್ರಕಾರ ಪಾಂಡವಪುರದ ಚಿಕ್ಕಮಸೀದಿಯಲ್ಲಿರುವ ಮನೆ ನಮ್ಮ ಅಜ್ಜಿ ಮತ್ತು ತಾತನ ಕಾಲಾನಂತರ ನಮ್ಮ ತಂದೆಗೆ ಸೇರತಕ್ಕದ್ದು ಎಂದು ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ಹಾಗೆಯೇ ಸರ್ವೆ ನಂ. 72/1 ಎ ರಲ್ಲಿ 0.32 ಗುಂಟೆ ಹಾಗೂ ಸರ್ವೆ ನಂ. 75/4 ರಲ್ಲಿ 0.41 ಗುಂಟೆ ಜಮೀನು ಸಿ ಕೆ ದೇವೇಗೌಡ ಮತ್ತು ನಾಗರಾಜುರವರಿಗೆ ಸೇರತಕ್ಕದ್ದು ಎಂದು ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ. 72/1 ಎ ರಲ್ಲಿರುವ 0.06 ಗುಂಟೆ ಜಮೀನು ನಮ್ಮ ತಂದೆಗೆ ಸೇರಬೇಕು ಎಂದು ತೀರ್ಮಾನವಾಗಿದೆ ಎಂದರೆ

ಸರಿಯಲ್ಲ. ನಮ್ಮ ಅಜ್ಜಿ ಮತ್ತು ತಾತನ ಕಾಲಾನಂತರ ಸರ್ವೆ ನಂ. 72/1 ಎ ರಲ್ಲಿ 0.32 ಗುಂಟೆ ಜಮೀನು ಹಾಗೂ 75/4 ರಲ್ಲಿರುವ 0.41 ಗುಂಟೆ ಜಮೀನು ಸಿ ಕೆ ದೇವೇಗೌಡ ಮತ್ತು ನಾಗರಾಜುರವರಿಗೆ ಸೇರತಕ್ಕದ್ದು ಎಂದು ಮತ್ತು ಪಾಂಡವಪುರದ ಚಿಕ್ಕಮಸೀದಿ ಬೀದಿಯಲ್ಲಿರುವ ಮನೆ ಹಾಗೂ ಸರ್ವೆ ನಂ. 72/1 ಎ ರಲ್ಲಿರುವ 0.06 ಗುಂಟೆ ಜಮೀನು ನಮ್ಮ ತಂದೆಗೆ ಸೇರಬೇಕು ಎಂದು ದಿನಾಂಕ 17.09.1984 ರ ಪಾಲುಪಟ್ಟಿಯಲ್ಲಿ ನಮೂದು ಆಗಿದೆ ಎಂದರೆ ಸರಿಯಲ್ಲ.

ನಮ್ಮ ತಾತ ತೀರಿಕೊಂಡು ಸುಮಾರು 40 ವರ್ಷಕ್ಕಿಂತ ಹೆಚ್ಚು ಆಗಿದೆ. ನಮ್ಮ ಅಜ್ಜಿ ತೀರಿಕೊಂಡು 16 ವರ್ಷವಾಗಿದೆ. ನಮ್ಮ ಅಜ್ಜಿ ಮತ್ತು ತಾತ ತೀರಿಕೊಂಡ ನಂತರ ಪಾಲುಪಟ್ಟಿಯ ಪ್ರಕಾರ ನಮ್ಮ ತಂದೆಯು ಪಾಂಡವಪುರದ ಚಿಕ್ಕಮಸೀದಿ ಬೀದಿಯ ಮನೆಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಮನೆಯನ್ನು ನಮ್ಮ ತಂದೆ ಬೇರೆಯವರಿಗೆ ಭೋಗ್ಯಕ್ಕೆ ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆ ಮನೆಯನ್ನು ಹರೀಶ್ ಎಂಬುವವರಿಗೆ 3 ಜನರೂ ಸೇರಿ ಭೋಗ್ಯಕ್ಕೆ ನೀಡಿದ್ದಾರೆ. ಹರೀಶ್ ರವರಿಗೆ 3 ಜನರು ಸೇರಿ ಭೋಗ್ಯ ಮಾಡದೆ ನಮ್ಮ ತಂದೆ ಮಾತ್ರ ಭೋಗ್ಯಕ್ಕೆ ನೀಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ಮತ್ತು ತಾತ ತೀರಿಕೊಂಡ ನಂತರ ನಮ್ಮ ತಂದೆಯು ಈ ಮೇಲ್ಕಂಡ ಸರ್ವೆ ನಂಬರು ಜಮೀನುಗಳ ಖಾತೆಯನ್ನು ನಮ್ಮ ತಂದೆಯು ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 3 ಜನರ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದು ಹೇಳುತ್ತಾರೆ. ನಮ್ಮ ತಂದೆ ಹೆಸರಿಗೆ ಆಗಿರುವ ಖಾತೆ ಸರಿ ಇಲ್ಲ ಎಂದು ಹೇಳಿ ವನಜಾಕ್ಷಮ್ಮ ಎಂಬುವವರು ಆರ್ ಮಿಸ್ ಸಂಖ್ಯೆ ನಂ.117/2021-22 ನ್ನು ದಾಖಲಿಸಿ ತಡೆಯಾಜ್ಞೆ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಅಜ್ಜಿ ಮತ್ತು ತಾತನ ಪಾಲಿನ ಆಸ್ತಿಗಳು ಅವರ ಮರಣಾ ನಂತರ 3 ಜನರಿಗೆ ಸಮವಾಗಿ ಹಂಚಿಕೆಯಾಗಬೇಕು ಎಂದು ನನ್ನ ಅಜ್ಜಿ ಹೇಳುತ್ತಿದ್ದರು. ವಿಭಾಗವು ಮೌಖಿಕವಾಗಿ ಆಗಿರದೆ ದಾಖಲೆಯ ಮೂಲಕ ಆಗಿದೆ ಎಂದರೆ ಸರಿಯಲ್ಲ. ಪಂಚಾಯಿತಿದಾರರ ಸಮಕ್ಷಮ ನನ್ನ ಅಜ್ಜಿ, ನನ್ನ ತಾತ, ನನ್ನ ತಂದೆ, ನಮ್ಮ ದೊಡ್ಡಪ್ಪ, ಹಾಗೂ ಚಿಕ್ಕಪ್ಪ ಎಲ್ಲರೂ ಸೇರಿ ದಿನಾಂಕ 17.09.1984 ರ ಪಾಲುಪಟ್ಟಿಯನ್ನು ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಪಂಚಾಯಿತಿದಾರರಾಗಿ ಚಿಕ್ಕಾಡೆ ಗ್ರಾಮದ ಸಿ ಅಣ್ಣೇಗೌಡ, ಚಂದ್ರೆ ಗ್ರಾಮದ ರಾಮೇಗೌಡ, ಕೆಂಪೇಗೌಡ, ಕೆ ಶೆಟ್ಟಹಳ್ಳಿಯ ಚಲುವಯ್ಯ, ಹರಳಹಳ್ಳಿಯ ಹೆಚ್ ಕೆ ಶ್ರೀಕಂಠಪ್ಪ ಸೇರಿ ವಿಭಾಗ ಮಾಡಿ ಪಾಲುಪಟ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ಮತ್ತು ನಮ್ಮ ತಾತನಿಗೆ ನೀಡಿರುವ ಆಸ್ತಿಗಳು ಅವರ ಮರಣಾ ನಂತರ ಯಾರಿಗೆ ಸೇರಬೇಕು ಎಂದು ಆ ಪಾಲುಪಟ್ಟಿಯಲ್ಲಿ ಬರೆದಿದ್ದಾರೆ ಎಂದರೆ ಸರಿಯಲ್ಲ.

1984 ರ ಪಾಲುಪಟ್ಟಿಯಲ್ಲಿ ಸೇರಿರುವ ಆಸ್ತಿಗಳು ಹೆಚ್ಚಾಗಿ ಚಂದ್ರೆ ಗ್ರಾಮಕ್ಕೆ ಸೇರಿದ ಆಸ್ತಿಗಳಾಗಿವೆ, ಪಾಲುಪಟ್ಟಿ ಆಗಿಲ್ಲ. ಪಾಂಡವಪುರಕ್ಕೆ ಸೇರಿದ ಕೆಲವು ಆಸ್ತಿಗಳು ಭಾಗ ಆಗದೆ ಹಾಗೆ ಉಳಿದುಕೊಂಡಿದ್ದವು ಎಂದರೆ ಸರಿಯಲ್ಲ. ಹಾಗೆ ಉಳಿದುಕೊಂಡಿದ್ದ ಆಸ್ತಿಗಳನ್ನು ದಿನಾಂಕ 10.09.1986 ರಂದು ನನ್ನ ತಂದೆ, ನನ್ನ ದೊಡ್ಡಪ್ಪ ಹಾಗೂ ನನ್ನ ಚಿಕ್ಕಪ್ಪ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ವಿಭಾಗದಲ್ಲಿ ನಮ್ಮ ತಂದೆಗೆ ಪಾಂಡವಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 35/3 ಎ ರಲ್ಲಿ 0.35 ಗುಂಟೆ, ಸರ್ವೆ ನಂ. 35/3 ಬಿ ರಲ್ಲಿ 0.05 ಗುಂಟೆ ಜಮೀನು ನಮ್ಮ ತಂದೆಯ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ಆ ಎರಡು ಸ್ವತ್ತುಗಳ ಖಾತೆ ನಮ್ಮ ತಂದೆಯ ಹೆಸರಿಗೆ ಆಗಿದೆ ಎಂದರೆ ಆ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿವೆ. ನಾವು ತುಂಬಾ ಚಿಕ್ಕವರಾಗಿದ್ದಾಗ ನಮ್ಮ ತಂದೆಯು ಅವುಗಳನ್ನು ಕ್ರಯಕ್ಕೆ ಪಡೆದಿದ್ದಾರೆ. ಯಾರಿಂದ ಕ್ರಯಕ್ಕೆ ಪಡೆದಿದ್ದಾರೆ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆ ಇದೆಯೇ ಎಂಬುದು ನನಗೆ ಗೊತ್ತಿಲ್ಲ. ಆ ಎರಡು ಜಮೀನುಗಳು ನಮ್ಮ

ಸ್ವಾಧೀನದಲ್ಲಿ ಇಲ್ಲ. ಆ ಜಮೀನುಗಳನ್ನು ಯಾರೋ ಮೋಸದಿಂದ ನಮ್ಮ ತಂದೆಯ ಬಳಿ ಬರೆಸಿಕೊಂಡಿದ್ದಾರೆ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಆ ಸಂಗತಿಯನ್ನು ಹೇಳಿದ್ದರಿಂದ ಗೊತ್ತಾಗಿದೆ. ಈಗ ಒಂದು ವರ್ಷದ ಹಿಂದೆ ಹೇಳಿದರು. ಮೋಸದಿಂದ ಬರೆಸಿಕೊಂಡಿದ್ದಾರೆ ಎಂದು ನಾವು ಕೇಸನ್ನು ಹಾಕಿಲ್ಲ. ದಿನಾಂಕ 10.12.2003 ರಂದು ಆ ಜಮೀನನ್ನು ನಾನು, ನಮ್ಮ ತಂದೆ ಮತ್ತು ಎಲ್ಲರೂ ಸೇರಿ ಬಿ.ಜಿ. ಗೋಪಾಲ್ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಹಾಗೆ ಮಾರಾಟ ಮಾಡಿದ ನಂತರ ನಮ್ಮ ತಂಗಿಯಾದ ತುಳಸಿಯ ಕೈಯಿಂದ ಅಸಲು ದಾವೆ ಸಂಖ್ಯೆ 86/2014 ನ್ನು ಹಾಕಿಸಿದ್ದೇವೆ ಎಂದರೆ ಸರಿಯಲ್ಲ. ಹಾಗೆ ಕೊಂಡುಕೊಂಡ ನಂತರ ಆ ಜಮೀನನ್ನು ಭೂ ಪರಿವರ್ತನೆ ಮಾಡಿಸಿಕೊಂಡು ಸೈಟುಗಳನ್ನು ನಿವೇಶನಗಳನ್ನಾಗಿ ವಿಗಂಡಿಸಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರಗಳೆಲ್ಲಾ ಚೆನ್ನಾಗಿ ಗೊತ್ತಿದ್ದರೂ ಸಹ ಈ ಕೇಸಿಗೆ ತೊಂದರೆ ಆಗುತ್ತದೆ ಎಂಬ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂಗಿ ಹಾಕಿರುವ ದಾವೆಯು ಪಾಂಡವಪುರದ ಅಪರ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ಚಂದ್ರೆ ಗ್ರಾಮದಲ್ಲಿರುವ ಮನೆಗಳನ್ನು ನಮ್ಮ ತಂದೆ, ನಮ್ಮ ದೊಡ್ಡಪ್ಪ ಹಾಗೂ ಚಿಕ್ಕಪ್ಪ ಹಂಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ತನ್ನ ತಾತ 3 ಜನರಿಗೂ ಮನೆಗಳನ್ನು ನೀಡಿದ್ದಾರೆ ಎಂದು ಹೇಳುತ್ತಾರೆ. ಪಾಲುಪಟ್ಟಿ ಆದ ನಂತರ ಕೆ ನಾಗರಾಜುರವರು ಸಿ.ಕೆ. ದೇವೇಗೌಡರಿಗೆ ಬರೆದುಕೊಟ್ಟಿರುವ ದಿನಾಂಕ 24.05.2004 ರ ಹಕ್ಕು ಬಿಡುಗಡೆ ಪತ್ರದ ಪ್ರಕಾರ ಪಾಂಡವಪುರದ ಚಿಕ್ಕಮಸೀದಿ ಬೀದಿಯಲ್ಲಿರುವ ಒಂದು ಮನೆ ಸಿ.ಕೆ. ದೇವೇಗೌಡರ ಹೆಸರಿಗೆ ಖಾತಾ ಬದಲಾವಣೆಯಾಗಿದೆ ಎಂದರೆ ಸರಿ. ಆ ಹಕ್ಕು ಬಿಡುಗಡೆ ಪತ್ರಕ್ಕೆ ನಮ್ಮ ತಂದೆ ಸಮ್ಮತಿ ಸಹಿ ಹಾಕಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ಮತ್ತು ತಾತನ ಪಾಲಿನ ಆಸ್ತಿಗಳು ಅವರ ಮರಣಾ ನಂತರ ಯಾರ ಯಾರಿಗೆ ಸೇರಬೇಕಾಗಿತ್ತೋ ಅವರಿಗೆ ಖಾತಾ

ವರ್ಗಾವಣೆ ಆಗಿ ಹೋಗಿದೆ ಎಂದರೆ ಸರಿಯಲ್ಲ. ಆ ಪ್ರಕಾರ ಅವರವರು ಅವರವರ ಪಾಲಿನ ಸ್ವತ್ತುಗಳ ಪ್ರತ್ಯೇಕ ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ.

ಸರ್ವೆ ನಂ. 72/1 ಎ ರಲ್ಲಿ 0.24 ಗುಂಟೆ ಜಮೀನು ಒಳಚರಂಡಿ ವ್ಯವಸ್ಥೆ ಯೋಜನೆಗೆ ಭೂ ಸ್ವಾಧೀನಗೊಂಡಿದೆ ಎಂದು ದಾವಾ ಪತ್ರದಲ್ಲಿ ಹೇಳಿದ್ದೇನೆ. ನಮ್ಮ ಅಜ್ಜಿ ಮತ್ತು ತಾತನ ಅಜ್ಜಪಾಲಿನ ಆಸ್ತಿಯಲ್ಲಿ ಹಾಗೆ ಹೋಗಿದೆ. ನಮ್ಮ ಅಜ್ಜಿ ಮತ್ತು ತಾತನ ಅಜ್ಜಪಾಲಿನ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಭೂ ಸ್ವಾಧೀನ ಆಗಿರುವ ಬಗ್ಗೆ ದಾಖಲೆಗಳನ್ನು ನಾನು ನೋಡಿದ್ದೇನೆ.

ಸರ್ವೆ ನಂ. 72/1 ರಲ್ಲಿ 0.24 ಗುಂಟೆ ಜಮೀನು ಸಿ.ಕೆ. ದೇವೇಗೌಡರಿಗೆ ದರಖಾಸ್ತು ಮೂಲಕ ಮಂಜೂರಾಗಿತ್ತು ಎಂದರೆ ಸರಿ. ಹಾಗೆ ಮಂಜೂರಾದ ಜಮೀನು ಒಳಚರಂಡಿ ವ್ಯವಸ್ಥೆ ಯೋಜನೆಗೆ ಭೂಸ್ವಾಧೀನ ಆಯಿತು ಎಂದರೆ ಸರಿಯಲ್ಲ. ಸದರಿ ಭೂ ಸ್ವಾಧೀನಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿದ್ದೇನೆ. ನಮ್ಮ ಅಜ್ಜಿ ಮತ್ತು ತಾತನಿಗೆ ಸೇರಿದ ಅಜ್ಜಪಾಲಿನ ಸರ್ವೆ ನಂ. 72/1 ಎ ರಲ್ಲಿನ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಒಳಚರಂಡಿ ಯೋಜನೆಗೆ ಭೂಸ್ವಾಧೀನಗೊಂಡಿದೆಯೋ ಅಥವಾ ಸಿ ಕೆ ದೇವೇಗೌಡರಿಗೆ ದರಖಾಸ್ತು ಮೂಲಕ ಮಂಜೂರಾಗಿದ್ದ ಸರ್ವೆ ನಂ. 72/1 ರಲ್ಲಿನ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿದೆಯೋ ಎಂಬ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ. ನಿಶಾನೆ ಪಿ 23 ನ್ನು ನ್ಯಾಯಾಲಯಕ್ಕೆ ನಾನೇ ಹಾಜರುಪಡಿಸಿದ್ದೇನೆ. ಅದರಲ್ಲಿ ಇರುವ ಸಿ ಕೆ ದೇವೇಗೌಡ ಬಿನ್ ಕರಿಯಪ್ಪ ಎಂದರೆ ನನ್ನ ದೊಡ್ಡಪ್ಪ. ನಿಶಾನೆ ಪಿ 23 ರಲ್ಲಿ ಸಿ ಕೆ ದೇವೇಗೌಡರ ಮುಂದೆ ಸರ್ವೆ ನಂ. 72/1 ಎಂದು ಮಾತ್ರ ಇದೆ. ನಿಶಾನೆಪಿ 23 ರಲ್ಲಿ ಸರ್ವೆ ನಂ. 72/1 ರಲ್ಲಿ 0.24 ಗುಂಟೆ ಜಮೀನು ಭೂ ಸ್ವಾಧೀನಗೊಂಡಿದೆ ಎಂದು ಮಾತ್ರ ಇದೆ. ಸಾಕ್ಷಿ ಮುಂದುವರಿದು ತನ್ನ ದೊಡ್ಡಪ್ಪ ಸಿ ಕೆ ದೇವೇಗೌಡರಿಗೆ ದರಖಾಸ್ತು ಮೂಲಕ ಮಂಜೂರಾಗಿದ್ದ 0.24 ಗುಂಟೆ ಜಮೀನು

ಭೂಸ್ವಾಧೀನಗೊಂಡಿರದೆ ತನ್ನ ಅಜ್ಜಿ ಮತ್ತು ತಾತನಿಗೆ ಅಜ್ಜಪಾಲು ಎಂದು ನೀಡಿದ್ದ 0.32 ಗುಂಟೆ ಪೈಕಿ 0.24 ಗುಂಟೆ ಜಮೀನು ಭೂಸ್ವಾಧೀನಗೊಂಡಿದೆ ಎಂದು ಹೇಳುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**